


**ISSN: 2454–5813**
IJKR 2025; 11(1): 01-04
© 2025 IJKR
www.kannadajournal.com
Received: 01-10-2024
Accepted: 04-11-2024

**ಶ್ರುತಿ ಅಮೀನ್ ಕೆ**
ಮಂಗಳೂರು ವಿಶ್ವವಿದ್ಯಾನಿಲಯ
ಸಂಶೋಧನಾರ್ಥಿ
ಮಂಗಳ ಗಂಗೋತ್ರಿ ಕೊಣಾಜೆ,
ಮಂಗಳೂರು, ಕರ್ನಾಟಕ, ಭಾರತ

**Corresponding Author:**
**ಶ್ರುತಿ ಅಮೀನ್ ಕೆ**
ಮಂಗಳೂರು ವಿಶ್ವವಿದ್ಯಾನಿಲಯ
ಸಂಶೋಧನಾರ್ಥಿ
ಮಂಗಳ ಗಂಗೋತ್ರಿ ಕೊಣಾಜೆ,
ಮಂಗಳೂರು, ಕರ್ನಾಟಕ, ಭಾರತ

# ತುಳು ಚಳುವಳಿಯ ಆಧುನಿಕ ಸ್ವರೂಪ

**ಶ್ರುತಿ ಅಮೀನ್ ಕೆ**

**ಪೀಠಿಕೆ**

ತುಳು ಭಾಷೆಯು ವ್ಯಾವಹಾರಿಕ ಭಾಷೆಯಾಗಿ ಪ್ರಾಚೀನ ಕಾಲದಿಂದಲೂ ಇತ್ತಾದರೂ ತುಳು ಲಿಪಿ ಮಾತ್ರ ಜನಸಾಮಾನ್ಯರೊಂದಿಗೆ ಬೆರೆತಿರಲಿಲ್ಲ. ಹಾಗಾಗಿ ತುಳುಲಿಪಿಯ ಕುರಿತು ಹಲವಾರು ಚರ್ಚೆಗಳು ಪ್ರಸ್ತುತವರೆಗೂ ನಡೆಯುತ್ತಿದೆ. ತುಳುಭಾಷೆ ಪಂಚದ್ರಾವಿಡ ಭಾಷೆಗಳಲ್ಲಿ ಒಂದಾಗಿದ್ದು ತನ್ನದೇ ಆದ ಭಾಷಾ ವೈಶಿಷ್ಟ್ಯವನ್ನು ಹೊಂದಿದೆ. ತುಳುಭಾಷೆ, ತುಳುನಾಡಿನ ಕುರಿತಾಗಿಯೂ ಹಲವಾರು ಆಯಾಮಗಳಲ್ಲಿ ಸಂಶೋಧಕರು ಚರ್ಚಿಸಿದ್ದಾರೆ. ಪ್ರಸ್ತುತ ಈ ಲೇಖನವು ತುಳುನಾಡಿನಲ್ಲಿ ನಡೆದ ನಾಡುನುಡಿ ಚಳುವಳಿಯ ಆಧುನಿಕ ಸ್ವರೂಪದ ಕುರಿತು ಚರ್ಚಿಸುತ್ತದೆ.

ತುಳುನಾಡಿನಲ್ಲಿ ಈವರೆಗೆ ಹಲವಾರು ಚಳುವಳಿಗಳು ನಡೆದಿವೆ. ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಆರಂಭಗೊಂಡ ಅಸಹಕಾರ ಚಳುವಳಿ, ಸ್ವದೇಶಿ ಚಳುವಳಿ, ಬೀಡಿ ಕಾರ್ಮಿಕರ ಚಳುವಳಿ, ರೈತರ ಚಳುವಳಿ, ವಿವಿಧ ಪಕ್ಷಗಳ ಚಳುವಳಿ ಸಂಘಟನೆಗಳ ಚಳುವಳಿ ಇತ್ಯಾದಿ ಅವುಗಳಲ್ಲಿ ತುಳುನಾಡು ನುಡಿಗೆ ಸಂಬಂಧಿಸಿದ ಪಣಿಯಾಡಿ ಚಳುವಳಿಯನ್ನು ಅವಲೋಕಿಸಿ ಇದರ ಮುಂದುವರಿಕೆಯ ಕುರಿತು ವಿಶ್ಲೇಷಿಸುವ ಪ್ರಯತ್ನ ಇಲ್ಲಿದೆ. ಪಣಿಯಾಡಿಯವರ ಕಾಲಘಟ್ಟದಲ್ಲಿ ಆರಂಭಗೊಂಡ ಚಳುವಳಿ ವಿವಿಧ ಹೆಸರುಗಳಿಂದ ಪ್ರಸ್ತುತದಲ್ಲೂ ಆಧುನಿಕ ಸ್ವರೂಪವನ್ನು ಪಡೆದಿದೆ. ತುಳುನಾಡು–ನುಡಿ ಕುರಿತಾಗಿ ಸಾಹಿತ್ಯಿಕ ಸಂಶೋಧನ ಕಾರ್ಯಗಳ ಸಂಖ್ಯೆ ಹೆಚ್ಚಾಗಿದ್ದು, ತುಳು ಎಂಟನೇ ಪರಿಚ್ಛೇದಕ್ಕೆ ಸೇರುವ ಉದ್ದೇಶದೊಂದಿಗೆ ಚಳುವಳಿ ನಿರಂತರ ಮುಂದುವರಿಕೆಯಾಗಿದೆ.

ತುಳು ಚಳುವಳಿಯು ಇತರ ಚಳುವಳಿಗಿಂತ ಸಂಪೂರ್ಣ ಭಿನ್ನವಾದದ್ದು. ಇಲ್ಲಿ ಚಳುವಳಿ ಎಂದರೆ ಹೋರಾಟ. ತನ್ನ ನಿರ್ದಿಷ್ಟ ಉದ್ದೇಶಕ್ಕಾಗಿ ನಡೆಸುವ ಶಾಂತಿಯುತ ಹೋರಾಟ, ಸಾವು, ನೋವು ಹೊರತಾದ ಚಳುವಳಿ. ಎಸ್ ಯು ಪಣಿಯಾಡಿಯವರು ತುಳು ಚಳುವಳಿಯ ಪಿತಾಮಹರು. 1927 ರಿಂದ 1938ರವರೆಗೆ ಇವರ ನೇತೃತ್ವದಲ್ಲಿ ಈ ಚಳುವಳಿ ನಡೆಯುತ್ತದೆ. 'ತುಳು ಚಳುವಳಿ' ದೊಡ್ಡ ಮಟ್ಟಿಗೆ ಹೆಸರು ಪಡೆಯಿತಾದರೂ. ತುಳು ಭಾಷೆಯ ಕುರಿತು ಅಭಿಮಾನ ಹೊಂದಿದ ಉತ್ಸಾಹಿ ತರುಣರ ತಂಡ ಈ ಚಳುವಳಿಯ ಪೂರ್ವದಿಂದಲೇ ತನ್ನ ಕಾರ್ಯ ಆರಂಭಿಸಿಕೊಂಡಿತು. ಪೊಳಲಿ ಶೀನಪ್ಪ ಹೆಗಡೆ, ಗೋವಿಂದ ಪೈ, ಇವರ ತುಳುವಿನ ಕೊಡುಗೆ ತಳ ಮಟ್ಟದ ಅಧ್ಯಯನವಾಗಿದೆ. ನಂತರ ಇವರೂ ಕೂಡ ಪಣಿಯಾಡಿಯವರ ತುಳುಚಳುವಳಿಯಲ್ಲಿ ಭಾಗಿಗಳಾಗುತ್ತಾರೆ.

**ಚಳುವಳಿಯ ಆಧುನಿಕ ಸ್ವರೂಪವನ್ನು ಈ ಹಂತಗಳಲ್ಲಿ ಗುರುತಿಸಬಹುದಾಗಿದೆ.**

1. ಪಣಿಯಾಡಿ ತುಳು ಚಳುವಳಿ
2. ಮಾಧ್ಯಮದಲ್ಲಿ ತುಳು
3. ತುಳುಕೂಟದ ಕೊಡುಗೆ
4. ತುಳುಸಾಹಿತ್ಯ ಅಕಾಡೆಮಿ
5. ತುಳು ಸಾಹಿತ್ಯ ಸಮ್ಮೇಳನ
6. ಶೈಕ್ಷಣಿಕ ಅಧ್ಯಯನದಲ್ಲಿ ತುಳು
7. ಎಂಟನೇ ಪರಿಚ್ಛೇದ ತುಳು ಹೋರಾಟ

**1. ಪಣಿಯಾಡಿ ತುಳುಚಳುವಳಿ**

ತುಳುಚಳುವಳಿಯ ಕುರಿತಾಗಿ ಎಸ್.ಯು. ಪಣಿಯಾಡಿಯವರು 1931ರಲ್ಲಿ ಕಂಠೀರವ ಪತ್ರಿಕೆಗೆ 'ತುಳುತನಯ' ಎನ್ನುವ ಕಾವ್ಯನಾಮದಲ್ಲಿ ಬರೆದ ಪತ್ರದ ಸಾಲುಗಳು ಈ ರೀತಿ ಇವೆ. "ತುಳು ಚಳವಳ ಪಂಡ ಕರ್ನಾಟಕಗು ಎದ್‌ರ್‌ದ ಚಳವಳ ಪಣ್ಡ್ ಒಂತೆ ಜನ, ಕೊಂಕಣೆದಗಲೆನೆ ಎದ್‌ರ್‌ದ ಚಳವಳ ಪಣ್ಡ್ ಒಂತೆ ಜನ ತೆರಿಯೊಂದೆರ್. ಆಂಡ, ಸತ್ಯ ಸಂಗತಿ ಮಾತ್ರ ಅಂಚ ಇಜ್ಜಿ. ಉಂದು–ತುಳುನಾಡ್‌ದ ಆತ್ಮೋದ್ಧಾರೊಗು ಮಾತ್ರ ಇಪ್ಪುನ ಚಳುವಳಿ" (ಮುರಳೀಧರ ಉಪಾಧ್ಯ ಹಿರಿಯಡಕ, 1996, ಪು.ಸಂ–1)

ತುಳುಚಳುವಳಿಯು ಕರ್ನಾಟಕದ ಎದುರು ಚಳುವಳಿ, ಕೊಂಕಣಿಗರ ಎದರು ನಡೆಯುವ ಚಳುವಳಿಯಲ್ಲ, ತುಳುನಾಡಿನ ಆತ್ಮೋದ್ಧಾರಕ್ಕಾಗಿ ನಡೆಯುವ ಚಳುವಳಿ ಎಂದು ಇಲ್ಲಿ ತನ್ನ ಚಳುವಳಿಯ ಉದ್ದೇಶವನ್ನು ಸಮರ್ಥಿಸಿಕೊಂಡಿದ್ದಾರೆ. ಸ್ವಾತಂತ್ರ್ಯ ಚಳುವಳಿಯ ಕಾವು ಹೆಚ್ಚಾದಂತೆ ತಾಯ್ನಾಡು ಮತ್ತು ತಾಯ್ನಾಡಿನ ವಿಮೋಚನೆ ತುಳುಚಳುವಳಿಯ ಪ್ರಮುಖ ಉದ್ದೇಶವಾಗುತ್ತದೆ. ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದ ಸಂದರ್ಭದಲ್ಲಿ ಹಲವಾರು ತುಳುನಾಡ ಸ್ವಾತಂತ್ರ್ಯ ಹೋರಾಟಗಾರರ ಪರಿಚಯವಾಗುತ್ತದೆ. ಆ ಮೂಲಕ ತುಳುಚಳುವಳಿಯ ತಂಡವನ್ನು ಕಟ್ಟಿಕೊಳ್ಳುತ್ತಾರೆ. ಸಂಘಟನೆಯ ಅಗತ್ಯತೆ ಮನಗಂಡು 1928ರ ಸಪ್ಟೆಂಬರ್ 23ರಂದು ತುಳುಚಳುವಳಿಯ ಪೂರಕವಾಗಿ ತುಳುವ ಮಹಾಸಭೆಯನ್ನು 1932ರಲ್ಲಿ ಮುದ್ರಣಕ್ಕಾಗಿ ತುಳುನಾಡ್ ಪ್ರೆಸ್ ಆರಂಭಿಸುತ್ತಾರೆ.

ಪಣಿಯಾಡಿ ತುಳುಚಳುವಳಿಯು ಮುಖ್ಯವಾಗಿ ಎರಡು ಬೇಡಿಕೆಯ ಈಡೇರಿಕೆಗಾಗಿ ನಡೆಯಿತು. ಒಂದು ಭಾಷಿಕ ನೆಲೆಯಿಂದ ಮತ್ತೊಂದು ತುಳು ರಾಜ್ಯದ ಸ್ಥಾಪನೆಗಾಗಿ. ಭಾಷಿಕ ನೆಲೆಯಿಂದಾಗಿ ಅದಕ್ಕೆ ಪೂರಕವಾಗಿ ತುಳುವ ಸಾಹಿತ್ಯ ಮಾಲೆಯನ್ನು ಆರಂಭಿಸುತ್ತದೆ. ತುಳುಭಾಷೆ ಮೌಖಿಕ ನೆಲೆಯಿಂದ ಶ್ರೀಮಂತವಾದ ಭಾಷೆ ಈ ಶ್ರೀಮಂತಿಕೆಯ ಭಾಷೆಯೂ ಅಚ್ಚಾಗಬೇಕು. ತಲೆಮಾರಿನಿಂದ ತಲೆಮಾರಿಗೆ ಕೃತಿಯ ರೂಪದಲ್ಲೂ ದಾಖಲೀಕರಣ ನಡೆಯಬೇಕೆಂಬ ನೆಲೆಯಿಂದ ತುಳುವ ಸಾಹಿತ್ಯ ಮಾಲೆಯ ಮೂಲಕ ತುಳುವಿನ ಬೇರೆ ಬೇರೆ ಸಾಹಿತ್ಯಿಕ ರೂಪದ ಪುಸ್ತಕಗಳು ಪ್ರಕಟಗೊಳ್ಳುತ್ತದೆ. ತುಳುವ ರಾಜ್ಯದ ಸ್ಥಾಪನೆಯ ಬೇಡಿಕೆಯೂ ಬಲವಾಗಿ ನಡೆಯುತ್ತದೆ. ಹಲವಾರು ಸಭೆಗಳು ಹೋರಾಟಗಳು ನಡೆಯುತ್ತವೆ. ತುಳುನಾಡನ್ನು ಆಳುತ್ತಿದ್ದ ರಾಜವಂಶಗಳು, ಬೇರೆ ಬೇರೆ ರಾಜರು, ವಿದೇಶಿಗರು ತುಳುನಾಡನ್ನು 'ತುಳುರಾಜ್ಯ' ಎಂಬ ಉಲ್ಲೇಖದೊಂದಿಗೆ ನೀಡಿರುವುದನ್ನು ನಾವು ಕಾಣಬಹುದು. ಅಂತೆಯೇ ತುಳುನಾಡನ್ನು ಜಿಲ್ಲೆಯಾಗಿಸಿ, ಕರ್ನಾಟಕ ಪ್ರಾಂತಕ್ಕೆ ಸೇರಿಸಬೇಕೆಂಬ ತುಡಿತ ಹೋರಾಟಗಾರರಲ್ಲಿ ತೀವ್ರವಾಗಿ ಅದಕ್ಕೆ ಪೂರಕ ಸಂದ ಸನ್ನಿವೇಶಗಳನ್ನು ಬಳಸಿಕೊಂಡು ಚಳುವಳಿಯನ್ನು ಮುಂದುವರಿಸುತ್ತಾರೆ.

**2. ಮಾಧ್ಯಮಗಳಲ್ಲಿ ತುಳು**

ತುಳುನಾಡು–ನುಡಿಯ ಅಭಿಮಾನ ವರುಷಗಳು ಕಳೆದಂತೆ ಹೊಸ ಆಯಾಮದಲ್ಲಿ ಮುಂದುವರಿಯುತ್ತದೆ. ಪಂಚ ದ್ರಾವಿಡ ಭಾಷೆಗಳಲ್ಲಿ ತುಳುವನ್ನು ಹೊರತುಪಡಿಸಿ ಎಲ್ಲಾ ಭಾಷೆಗಳಿಗೂ ನಿರ್ದಿಷ್ಟ ಸ್ಥಾನಮಾನ ದೊರೆತಿದೆ. ಅಂತೆಯೇ ತುಳುವಿಗೂ ಎಲ್ಲಾ ರೀತಿಯ ಸ್ಥಾನಮಾನ ದೊರೆಯುವಲ್ಲಿ ಮಾಧ್ಯಮಗಳ ಪಾತ್ರವೂ ಇದೆ. ಸಾಮಾನ್ಯರ ಆಡುಮಾತು ಮಾಧ್ಯಮಗಳಲ್ಲೂ ಪ್ರಸಾರವಾಗಬೇಕೆಂಬ ಧ್ವನಿ ಗಟ್ಟಿಯಾಗುತ್ತದೆ. ದೃಶ್ಯ ಮಾಧ್ಯಮ ಶ್ರವ್ಯ ಮತ್ತು ಮುದ್ರಣ ಮಾಧ್ಯಮದಲ್ಲೂ ತುಳುವರ ಬೇಡಿಕೆಯಂತೆ ತುಳುಭಾಷೆ ಸೇರಿಕೊಳ್ಳುತ್ತದೆ.

**ದೂರದರ್ಶನ**

ದೂರದರ್ಶನಕ್ಕೆ ಇಡೀ ಕರ್ನಾಟಕದ ವ್ಯಾಪ್ತಿಇದೆ. ಹೀಗಾಗಿ ಪ್ರಾದೇಶಿಕವಾದ ತುಳುಭಾಷೆಯ ಕಾರ್ಯಕ್ರಮದ ದಾಮಾಶಯ ಕಡಿಮೆ. ಅದರೂ ತುಳುಭಾಷೆಯಲ್ಲೂ ಕಾರ್ಯಗಳು ಪ್ರಸಾರವಾಗಬೇಕೆಂಬ ಬಯಕೆಯಿಂದ ಬೆಂಗಳೂರಿನಲ್ಲಿ ನೆಲೆಸಿದ ತುಳುವರು ಹೊರನಾಡ ತುಳುವರು, ಜನಪ್ರತಿನಿಧಿಗಳ ಬೇಡಿಕೆಯಿಂದ ಆರಂಭದಲ್ಲಿ ಮೂರು ತಿಂಗಳಿಗೊಮ್ಮೆ ತಲಾ ಅರ್ಧ ತಾಸು ಅವಧಿಯ ತುಳುಕಾರ್ಯಕ್ರಮಗಳು ಪ್ರಸಾರವಾಗ ತೊಡಗಿದವು. ಕ್ರಮೇಣ ಕೆಲವು ಚಲನಚಿತ್ರ ಧಾರವಾಹಿಗಳನ್ನು ಪ್ರಸಾರ ಮಾಡುತ್ತದೆ. ಇಲ್ಲಿ ತುಳುಭಾಷೆಗೆ ಪ್ರಾಶಸ್ತ್ಯ ದೊರಕದ್ದನ್ನು ಕಂಡು ತುಳುವರು ತುಳುವಿನ ಪ್ರಥಮ ಕೇಬಲ್ ಟಿ.ವಿ, ಸುದ್ಧಿ ವಾಹಿನಿ, ನಮ್ಮ ಕುಡ್ಲ 1999ರ ಸಪ್ಟೆಂಬರ್ 04ರಂದು ಆರಂಭವಾಗುತ್ತದೆ. ತುಳು ಭಾಷೆಯಲ್ಲಿ ಕಾರ್ಯಕ್ರಮಗಳನ್ನು ಪ್ರಸಾರಮಾಡುತ್ತಾ, ಪ್ರಸ್ತುತದಲ್ಲೂ ಕಾರ್ಯಚರಿಸುತ್ತಿದೆ. ದೇಶೀ, ವಿದೇಶದಲ್ಲಿರುವ ತುಳುವರ ಸಂಘಟನೆಗಳೂ, ತುಳುವರು ತುಳು ಖಾಸಗಿ ಸುದ್ಧಿವಾಹಿನಿಗೆ ಹೆಚ್ಚು ಒತ್ತು ನೀಡುತ್ತಾರೆ.

**ಆಕಾಶವಾಣಿಯಲ್ಲಿ ತುಳು**

ಇಪ್ಪತ್ತೆಯ ಶತಮಾನದಲ್ಲಿ ಸಂಪರ್ಕ ಮಾಧ್ಯಮದಲ್ಲಿ ಒಂದು ರೀತಿಯ ಸಂಚಲನವನ್ನು ಆಕಾಶವಾಣಿ ಸೃಷ್ಟಿಸುತ್ತದೆ. 24 ಪ್ರಧಾನ ಭಾಷೆ ಹಾಗೂ 146 ಉಪಭಾಷೆಗಳಲ್ಲಿ ರೇಡಿಯೋ ಕಾರ್ಯಕ್ರಮಗಳು ಪ್ರಸಾರವಾಗುತ್ತಿತ್ತು. ತುಳುನಾಡಿನ ಜನರ ಬಹುಕಾಲದ ಬೇಡಿಕೆ 1976ರಲ್ಲಿ ಪೂರ್ಣಗೊಳ್ಳುತ್ತದೆ. ತುಳುಭಾಷೆಯಲ್ಲೂ ಕಾರ್ಯಕ್ರಮಗಳು ಬಿತ್ತನೆಗೊಳ್ಳಲು ಆರಂಭವಾಗುತ್ತದೆ. ಆರಂಭಿಕವಾಗಿ ಮಂಗಳೂರಿನಲ್ಲಿ ಸ್ಟುಡಿಯೋ ಮತ್ತು ಅಲ್ಪಶಕ್ತಿಯ ಪ್ರಸಾರ ಕೇಂದ್ರ ಹಾಗೂ ಉಡುಪಿ ಬ್ರಹ್ಮಾವರದಲ್ಲಿ ಇದಕ್ಕೆ ಸಂಬಂಧಿಸಿದ ಶಕ್ತಿಶಾಲಿ ಟ್ರಾನ್ಸ್ ಮೀಟರ್ ಆರಂಭಗೊಂಡಿತು. ಮಂಗಳೂರು ಆಕಾಶವಾಣಿಯು ಪ್ರಾಯೋಗಿಕ ಪ್ರಸಾರ ಕಾಲದಿಂದಲೂ ಉತ್ತಮ ಗುಣಮಟ್ಟದ ವಿವಿಧ ಕಾರ್ಯಕ್ರಮಗಳನ್ನು ಪ್ರಸಾರ ಮಾಡುತ್ತಾ ಬಂದಿದೆ. ತುಳುಭಾಷೆಗೆ ನಿರ್ದಿಷ್ಟ ಕಾಲಾವಧಿಯನ್ನು ಮೀಸಲಿರಿಸಿ ಅದರನ್ವಯ ಕಾರ್ಯಕ್ರಮಗಳು ಪ್ರಸಾರವಾಗುತ್ತದೆ. ತುಳುಭಾಷೆ, ಸಾಹಿತ್ಯ, ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಆಕಾಶವಾಣಿ ಕಾರ್ಯಚರಿಸುತ್ತದೆ. ಪ್ರಸ್ತುತ ಪದಪತ್ತಯ–ತುಳು ಸಬ್ಡೊಲೆದ ಉಲತಿರ್ಲ್, ತುಳುಕತೆ, ತುಳುಭಾಷಣ, ಉಡಲ್ದ ಪಾತೆರ ಹೆಚ್ಚು ಕೇಳುಗರನ್ನು ಹೊಂದಿರುವ ಕಾರ್ಯಕ್ರಮ.

**ಪತ್ರಿಕೆ**

ಭಾಷೆಯ ಜೀವಂತಿಕೆಗೆ ಪತ್ರಿಕೆಯ ಪಾತ್ರ ಅಗತ್ಯ. ತುಳುನಾಡು ಕನ್ನಡ ಪತ್ರಿಕೋದ್ಯಮದ ತವರು ಮನೆ. ಮಂಗಳೂರು ಸಮಾಚಾರ (1845) ತುಳುನಾಡಿನಲ್ಲಿ ಮುದ್ರಣಗೊಂಡು ರಾಜ್ಯದಾದ್ಯಂತ ಹಂಚಲ್ಪಡುತ್ತಿತ್ತು. ತುಳು ಓದುಗರನ್ನು ಓಲೈಸುವ ನೆಲೆಯಿಂದ ತುಳು ಅಂಕಣದಲ್ಲಿ ಕೆಲವು ಸುದ್ದಿಗಳು, ವಿಚಾರಗಳು ತುಳುವಿನಲ್ಲಿಯೂ ಪ್ರಕಟವಾಗುತ್ತಿದ್ದವು. ತುಳುಭಾಷೆಯಲ್ಲಿಯೇ ಪತ್ರಿಕೆಗಳು, ಮಾಸಿಕಗಳು ಮುದ್ರಣಗೊಳ್ಳಲು ಆರಂಭವಾಗುತ್ತದೆ. ಕೆಲವನ್ನು ಉಲ್ಲೇಖಿಸುವುದಾದರೆ, ನವಯುಗ, ತುಳುವೆರೆ ಬಂಧು, ತುಳುಸಿರಿ, ತುಳುಕೂಟ ಪತ್ರಿಕೆಗಳು ತುಳುವೆರ್, ತುಳುಬೊಳ್ಳಿ, ಪ್ರಸ್ತುತ ಲಭ್ಯವಿರುವ ತುಳು ಪತ್ರಿಕೆಗಳು ಟೈಮ್ಸ್ ಆಫ್ ಕುಡ್ಲ, ತುಳುನಾಡು ವಾರ್ತೆ, ಪೂವರಿ.

ತುಳುಭಾಷೆಯ ಪ್ರಾಮುಖ್ಯ ಮತ್ತು ತಲೆತಲಾಂತರದವರೆಗೆ ಗಟ್ಟಿಗೊಳ್ಳುವುದು ಈ ಪತ್ರಿಕೆ ಪ್ರಮುಖ ಉದ್ದೇಶವಾಗಿದೆ.

ಜನಸಾಮಾನ್ಯರನ್ನು ಸುಲಭದಲ್ಲಿ ತಲುಪುವ ಮಾಧ್ಯಮವಾಗಿದೆ. ಮಂಗಳೂರು ಸಮಾಚಾರ: ಕನ್ನಡದ ಮೊದಲ ಪತ್ರಿಕೆಯಾಗಿದೆ ಬಾಸೆಲ್ ಮಿಶನರಿ ಮೂಲಕ ಮುದ್ರಣಗೊಳ್ಳುತ್ತಿತ್ತು.

**3. ತುಳುಕೂಟದ ಕೊಡುಗೆ**

ಭಾಷಾಭಿಮಾನದಿಂದ ಹಲವಾರು ಸಂಘಟನೆಗಳು ಹುಟ್ಟಿಕೊಳ್ಳುತ್ತದೆ. ತುಳುಭಾಷೆಯ ಉಳಿವು ಮತ್ತು ತುಳುವಿನ ಅಸ್ತಿತ ಈ ಸಂಘಟನೆಗಳ ಮುಖ್ಯ ಉದ್ದೇಶವಾಗುತ್ತದೆ. ಮೊದಲನೆಯ ತುಳುಕೂಟ ಪಣಿಯಾಡಿಯವರ ತುಳುಚಳುವಳಿಯೊಂದಿಗೆ 'ತುಳುವ ಮಹಾಸಭೆ 1928ರಲ್ಲಿ ಹುಟ್ಟಿಕೊಂಡಿತ್ತು. 1969ರಲ್ಲಿ ತುಳುಕೂಟ ಕುಡ್ಲ ಮಂಗಳೂರಿನ ನ್ಯಾಯವಾದಿ ಎಸ್.ಆರ್. ಹೆಗ್ಡೆ ಮಾಜಿ ಮಂತ್ರಿ, ಬಿ ಸುಬ್ಬಯ್ಯ ಶೆಟ್ಟಿ, ಎ ಸಿ ಭಂಡಾರಿ, ರತ್ನಕುಮಾರ್ ತುಳುಕೂಟದ ಸ್ಥಾಪನೆಗೆ ಕಾರಣರಾದರು. ಹೀಗೆ ಕೆಲವು ತುಳುಕೂಟಗಳನ್ನು ಉಲ್ಲೇಖಿಸುವುದಾದರೆ, ತುಳುಕೂಟ ಪುತ್ತೂರು, ತುಳುಕೂಟ ಉಡುಪಿ, ಅಖಿಲಭಾರತ ತುಳು ಒಕ್ಕೂಟ, ತುಳುಕೂಟ ಬೆಳ್ತಂಗಡಿ ಹೀಗೆ ತುಳುನಾಡಿನಲ್ಲಿ ಮಾತ್ರವಲ್ಲದೆ ಹೊರರಾಜ್ಯಗಳಲ್ಲಿ ಮುಂಬಯಿ ತುಳುಸಂಘ, ತುಳುಕೂಟ ಬೆಂಗಳೂರು ಹೊರದೇಶಗಳಲ್ಲಿ ತುಳುನಾಡ ಸಂಘ ಬರೋಡ, ತುಳುಕೂಟ ಕತಾರ್, ತುಳುಕೂಟ ಕುವೈಟ್ ತುಳುಕೂಟ ಇಸ್ರೇಲ್ ಹೀಗೆ 80ಕ್ಕೂ ಹೆಚ್ಚು ತುಳುಸಂಘಟನೆಯನ್ನು ತುಳುವರು ಕಟ್ಟಿಕೊಂಡಿದ್ದಾರೆ. ಒಂದು ಭಾಷೆಯ ಉಳಿವಿಗೆ ಸಂಘಟಬೆಗಳ ಪಾತ್ರವೂ ಮುಖ್ಯವಾಗುತ್ತದೆ. ಈ ನೆಲೆಯಿಂದ ಈ ಸಂಘಟನೆಗಳು ಕಾರ್ಯನಿರ್ವಹಿಸುತ್ತಿದೆ. ತುಳುಭಾಷೆಯನ್ನು ಎಂಟನೇ ಪರಿಚ್ಛೇದಕ್ಕೆ ಸೇರಿಸಬೇಕೆಂಬುವುದು ಈ ಎಲ್ಲಾ ತುಳು ಸಂಘಟನೆಗಳ ಮುಖ್ಯ ಗುರಿಯಾಗಿದೆ.

**4. ತುಳುಸಾಹಿತ್ಯ ಅಕಾಡೆಮಿ**

ತುಳು ಭಾಷಾ ಉಳಿವಿನ ನೆಲೆಯಿಂದ ಬೇರೆ ಬೇರೆ ಸಂಘಟನೆಗಳು ಕೂಟಗಳು ಕಾರ್ಯಚರಿಸುತ್ತಿದ್ದವು. ಇದೇ ರೀತಿ ತುಳುನಾಡು ನುಡಿಯ ಉಳಿವಿನ ನೆಲೆಯಿಂದ 1994ರಲ್ಲಿ ಆಗಿನ ಮುಖ್ಯ ಮಂತ್ರಿಯಾದ ಎಂ. ವೀರಪ್ಪ ಮೊಯಿಲಿ ಅವರ ಕಾಲದಲ್ಲಿ ತುಳು ಸಾಹಿತ್ಯ ಅಕಾಡೆಮಿ ಸ್ಥಾಪನೆಯಾಯಿತು. 1994ರಿಂದ 1998ರವರೆಗೆ ಬಿ ಎ ವಿವೇಕ ರೈ ಅವರು ಅಧ್ಯಕ್ಷರಾಗಿದ್ದರು. ಅಕಾಡೆಮಿಯ ತುಳುಭಾಷಾ ನೆಲೆಯಿಂದ ಹಲವಾರು ಕಾರ್ಯಕ್ರಮಗಳು, ಯೋಜನೆಗಳನ್ನು ಕಮ್ಮಟಗಳನ್ನು ನಡೆಸುತ್ತಾ ಬಂದಿದೆ. ಗ್ರಂಥ ಪ್ರಕಟನೆಯು ಅಕಾಡೆಮಿಯ ಪ್ರಮುಖ ಉದ್ದೇಶಗಳಲ್ಲೊಂದು ಮದಪ್ಪೆರಾವಂದಿ ತುಳುವೆರ್,[i] ಪ್ರಾತಿನಿಧಿಕ ಸಂಕಲನ ಮಾಲಿಕೆ, ಸುವರ್ಣ ಕರ್ನಾಟಕ ಯೋಜನೆಯ ಪ್ರಕಟಣೆಗಳು, ಸಂಸ್ಕೃತಿ ಪರಿಚಯ ಮಾಲಿಕೆ ತ್ರೈಮಾಸಿಕಗಳು–ಮದಿಪು, ತುಳುದರ್ಶನ, ತುಳು ರಂಗ ನಾಟಕೊಲು–ಗೊಂಚಿಲ್ ಒಂಜಿ, ತುಳುರಂಗ ನಾಟಕೊಲು ಗೊಂಚಿಲ್ ರಡ್ಡ್, ವಿಶೇಷ ಪ್ರಕಟಣೆ, ಮರೆಯಬಾರದ ತುಳುವರು, ಜೋಕ್ಲೆಗಾದ್ ತುಳುಕತೆಕುಲು, ಸಾಹಿತ್ಯ ಪರಿಚಯ ಮಾಲಿಕೆ– ಹೀಗೆ ಈ ಶೀರ್ಷಿಕೆಯಡಿಯಲ್ಲಿ ತುಳುವಿನ ಪುಸ್ತಕಗಳು ಪ್ರಕಟಣೆಯಾಗಿವೆ. ಕಾಸರಗೋಡು ತುಳುನಾಡಿನಿಂದ ಬೇರೆಯಾದರೂ ತುಳುವಿನ ಅಸ್ತಿತ್ವಕ್ಕಾಗಿ ಹೋರಾಡುವ ತುಳುವರು ಕೇರಳದಲ್ಲೂ ತುಳು ಸಾಹಿತ್ಯ ಅಕಾಡೆಮಿಯನ್ನು ಸ್ಥಾಪಿಸಿ, ಅಲ್ಲಿ ತುಳುವಿನ ಅನೇಕ ಯೋಜನೆಗಳು ಕಾರ್ಯಕ್ರಮಗಳು ನಡೆಯುತ್ತಿವೆ.

**ತುಳು ಸಾಹಿತ್ಯ ಸಮ್ಮೇಳನ**

ಎಂಬತ್ತರ ದಶಕದ ನಂತರದಲ್ಲಿ ತುಳುವಿನಲ್ಲಿ ಸಾಹಿತ್ಯ ಸಮ್ಮೇಳನಗಳು ನಡೆದವು. ತುಳುಭಾಷೆ, ಸಾಹಿತ್ಯ, ಸಂಸ್ಕೃತಿ ಕುರಿತಂತೆ ಪ್ರಥಮ ಸಮ್ಮೇಳನ ವಿಶುಕುಮಾರರು ಬೆಂಗಳೂರಿನಲ್ಲಿ 1983ರಲ್ಲಿ ಆಯೋಜಿಸಿದರು. ಈ ಸಮ್ಮೇಳನದ ಅಧ್ಯಕ್ಷರಾಗಿದ್ದವರು. ಕು.ಶಿ ಹರಿದಾಸ ಭಟ್ಟರು ಈ ಸಂದರ್ಭದಲ್ಲಿ ಬಿಡುಗಡೆಯಾದ ತುಳುವಿನ ಮೊದಲ ನೆನಪಿನ ಸಂಚಿಕೆಯ ಹೆಸರು 'ಪೊರ್ಲು' 1986 ಏಪ್ರಿಲ್ 15 ಮತ್ತು 16 ರಂದು ಮುಲ್ಕಿ ಬಪ್ಪನಾಡಿನಲ್ಲಿ ಅಖಿಲ ಭಾರತ ತುಳುಸಮ್ಮೇಳನ ನಡೆಯಿತು. ಸಮ್ಮೇಳನಾಧ್ಯಕ್ಷರಾಗಿ ಅಮೃತ ಸೋಮೇಶ್ವರ, ಹಾಗೂ ಸಮ್ಮೇಳನದ ಅಂಗವಾಗಿ ಪ್ರೊ. ಚಿನ್ನಪ್ಪ ಗೌಡರ ಸಂಪಾನೆಯಲ್ಲಿ ಪನಿಯಾರ ನೆನಪು ಸಂಚಿಕೆ ಹೊರತಂದಿದೆ. 1994ರಲ್ಲಿ ಮಂಗಳೂರಿನಲ್ಲಿ ವಿಶ್ವತುಳು ಸಮ್ಮೇಳನ, 2001ರಲ್ಲಿ ಬಂಟ್ವಾಳ ತಾಲೂಕು ಒಡಿಯೂರಿನಲ್ಲಿ ಡಾ. ಸುನೀತಾ ಎಂ ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ತುಳುಸಾಹಿತ್ಯ ಸಮ್ಮೇಳನ ನಡೆಯಿತು. 2009ರಲ್ಲಿ ಉಜಿರೆಯಲ್ಲಿ ವಿಶ್ವ ತುಳುಸಮ್ಮೇಳನ ನಡೆಯಿತು. ಪ್ರಸ್ತುತದವರೆಗೂ ಸಾಹಿತ್ಯ ಸಮ್ಮೇಳನಗಳು ನಡೆಯುತ್ತಿದೆ.

**6. ಶೈಕ್ಷಣಿಕ ಅಧ್ಯಯನದಲ್ಲಿ ತುಳು**

ಆರಂಭಗೊಂಡಿತ್ತು. ತುಳು ಪಠ್ಯ ಪುಸ್ತಕದ ರಚನೆಯ ದಾಖಲೆಗಳು ಪಠ್ಯಪುಸ್ತಕಗಳು ಲಭಿಸಿವೆ. ಉಡುಪಿಯ ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರವು ತುಳು ಸಾರಸ್ವತ ಪ್ರಪಂಚದಲ್ಲಿ ಮೈಲಿಗಲ್ಲೊಂದನ್ನು ಹುಟ್ಟುಹಾಕಿತ್ತು. 1979ರಿಂದ ಆರಂಭಗೊಂಡ ತುಳುನಿಘಂಟು ಯೋಜನೆಯಡಿಯಲ್ಲಿ ವಿದ್ವಾಂಸರು 18ವರ್ಷಗಳ ಕಾಲ ದುಡಿದು ಆರು ಸಂಪುಟಗಳ ಐತಿಹಾಸಿಕ ತುಳುನಿಘಂಟು ಹೊರತಂದರು. 1992ರಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಶ್ರೀಧರ್ಮಸ್ಥಳ ಮಂಜುನಾಥೇಶ್ವರ ತುಳು ಪೀಠದ ಸ್ಥಾಪನೆಯಾಯಿತು. ತುಳು ಜಾನಪದ ಸಾಹಿತ್ಯ, ಅಧ್ಯಯನ, ಸಂಗ್ರಹ, ಸಂಶೋಧನೆಯ ಕೆಲಸಗಳು ಆರಂಭಗೊಂಡವು. ಸೃಜನ ಶೀಲ ಸಾಹಿತ್ಯದ ಬೆಳವಣಿಗೆಗೂ ಇಂಬು ದೊರೆಯಿತು. ಕಾವ್ಯ, ನಾಟಕ, ಸಂಶೋಧನ ಕೃತಿರಚನೆ ಅವ್ಯಾಹತವಾಯಿತು. ನಿಟ್ಟೆ ವಿಶ್ವವಿದ್ಯಾನಿಲಯದಲ್ಲಿ 2014ರಲ್ಲಿ ತುಳುಅಧ್ಯಯನ ಕೇಂದ್ರವೊಂದು ರೂಪುಗೊಂಡು ತುಳು ಜ್ಞಾತಿಪದ ಯೋಜನೆ ಆರಂಭವಾಯಿತು. 2019ರಲ್ಲಿ 'ತುಳು ಜ್ಞಾತಿಪದ ಸಂಚಯ' ಬೃಹತ್ ಕೃತಿಯೊಂದಿಗೆ ಯೋಜನೆ ಮುಕ್ತಾಯಗೊಂಡು ಅಲ್ಲಿ ಮುಂದಿನ ಬೃಹತ್ ಕಾರ್ಯಗಳಿಗೆ ನಾಂದಿಯಾಯಿತು. 2015ರಿಂದ ಶಾಲೆಗಳಲ್ಲಿಯೂ ತುಳು ಭಾಷಾಕಲಿಕೆ ಆರಂಭಗೊಂಡಿತು. 2018ರಲ್ಲಿ ಮಂಗಳೂರು ವಿಶ್ವವಿದ್ಯಾನಿಲಯ ತುಳು ಎಂ.ಎ ಸ್ನಾತಕೋತ್ತರ ವಿಭಾಗವನ್ನು ಆರಂಭಿಸಿತ್ತು. ವಿಶ್ವವಿದ್ಯಾನಿಲಯದ ಕನ್ನಡ ವಿಭಾಗದಲ್ಲಿ ತುಳು ಭಾಷೆಯನ್ನು ಐಚ್ಛಿಕ ವಿಷಯವಾಗಿ ಕಲಿಯುವ ಅವಕಾಶ ಮಾತ್ರವಲ್ಲದೆ ತುಳು ವಿಷಯದ ಮೇಲೆ ಪಿ.ಎಚ್.ಡಿ ಗೆ ಅವಕಾಶವಿತ್ತು ಪ್ರಸ್ತುತ ಅಧ್ಯಯನಗಳು ನಡೆಯುತ್ತಿವೆ. ದ್ರಾವಿಡ ವಿಶ್ವವಿದ್ಯಾನಿಲಯದಲ್ಲಿಯೂ 2007ರಲ್ಲಿ ತುಳು ವಿಭಾಗ ಆರಂಭಗೊಂಡು ತುಳುವಿನ ವಿಷಯದ ಮೇಲೆ ಪಿ.ಎಚ್.ಡಿ ಅಧ್ಯಯನಗಳು ನಡೆದಿವೆ. ಪ್ರಸ್ತುತದ ದಿನಗಳಲ್ಲಿಯೂ ನಡೆಯುತ್ತಿವೆ.

**7. ಎಂಟನೇ ಪರಿಚ್ಛೇದ –ತುಳುವಿನ ಹೋರಾಟ**

ತುಳು ಭಾಷೆಯು ಇತರ ದ್ರಾವಿಡ ಭಾಷೆಗಳಂತೆ ಸಂವಿಧಾನ ಮಾನ್ಯತೆ ಪಡೆಯಬೇಕು ಎಂಬ ನೆಲೆಯಲ್ಲಿ ಅನೇಕ ವರ್ಷಗಳಿಂದ ತುಳುವರು, ಅಖಿಲಭಾರತ ತುಳು ಒಕ್ಕೂಟವೂ ಸೇರಿದಂತೆ, ವಿವಿಧ ತುಳು ಸಂಘಟನೆಗಳು ಒಕ್ಕೊರಲ ಬೇಡಿಕೆಯನ್ನು ಮುಂದಿಟ್ಟುಕೊಂಡು, ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಅವಶ್ಯ ದಾಖಲೆಗಳ ವಿವರಗಳೊಂದಿಗೆ ಸರ್ಕಾರಕ್ಕೆ ಮನವಿ ಸಲ್ಲಿಸಿತ್ತು. ಇದರಿಂದ ಯಾವುದೇ ಪ್ರತಿಫಲ ದೊರೆಯದ ಕಾರಣ2004ರಲ್ಲಿ

ಆಗಿನ ಮಾಜಿ ಮುಖ್ಯಮಂತ್ರಿ ಎಂ. ವೀರಪ್ಪ ಮೊಯಿಲಿ, ರಾಜ್ಯ, ಕೇಂದ್ರ ಸಚಿವರು, ವಿವಿಧ ತುಳು ಸಂಘಟನೆಗಳು ಸೇರಿ ಕೇಂದ್ರ ಸರ್ಕಾರಕ್ಕೆ ಸೂಕ್ತ ಮನವಿ ಸಿದ್ಧಪಡಿಸಿದರು. ರಾಜ್ಯದಲ್ಲಿ ಮಾತ್ರವಲ್ಲದೆ, ರಾಜಧಾನಿ ದೆಹಲಿಯಲ್ಲಿ 'ತುಳುನಾಡ್ ಡೆವಲಪ್‌ಮೆಂಟ್ ಫೋರಂ' ಎನ್ನುವ ಸಂಘಟನೆ ರಚಿಸಿ ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಜೊತೆಸೇರಿ 2004 ಫೆಬ್ರವರಿ 16 ರಂದು ದೆಹಲಿಯಲ್ಲಿ ರಾಷ್ಟ್ರೀಯ ತುಳು ಸಮಾವೇಶ ಏರ್ಪಡಿಸಿ ಆಗಿನ ಕೇಂದ್ರ ರಕ್ಷಣಾ ಸಚಿವ ಜಾರ್ಜ್ ಫೆರ್ನಾಂಡೀಸರ ಮೂಲಕ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಲಾಯಿತು. ತುಳುಭಾಷೆ ಎಂಟನೇ ಪರಿಚ್ಛೇದದ ಹೋರಾಟ ಪ್ರಸ್ತುತವರೆಗೂ ನಡೆಯುತ್ತಲೇ ಇದೆ ಸರ್ಕಾರದ ಓಲೈಕೆಗಾಗಿ ರಾಜಕೀಯವಾಗಿಯೂ, ಬೆಂಬಲಗಳಿಕೆಗಾಗಿ ತುಳುವರು ತನ್ನದೇ ನೆಲೆಯಿಂದ ಹೋರಾಡುತ್ತಿದ್ದಾರೆ. ಪ್ರಸ್ತುತ 2024ರಲ್ಲಿಯೂ ತುಳು ಎಂಟನೇ ಪರಿಚ್ಛೇದಕ್ಕೆ ಸೇರಲು ಬೇಕಾದ ಅರ್ಹತೆಗಳ ವರದಿಯನ್ನು ತಯಾರಿಸಿ ಈ ನೆಲೆಯಿಂದಲೇ ಸಂಘಟನೆ ಕಟ್ಟಿ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದೆ.

ಹೀಗೆ ತುಳುಚಳುವಳಿಯು ಪಣಿಯಾಡಿ ಕಾಲದಿಂದ ಹಿಡಿದು ಪ್ರಸ್ತುತ ಕಾಲದವರೆಗೂ ನಾಡು ನುಡಿಯ ಅಭಿಮಾನದಿಂದ ಸಾಗುತ್ತಿದೆ. ತುಳುಭಾಷೆ ತಲೆತಲಾಂತರದವರೆಗೆ ಉಳಿದು ಸಾಗಿಕೊಂಡು ಬರಬೇಕೆಂಬುದು ಪ್ರತಿಯೊಬ್ಬ ತುಳುವರ ಆಶಯವಾಗಿದೆ. ಈ ಹೋರಾಟವು ತುಳು ಭಾಷೆ ಎಂಟನೇ ಪರಿಚ್ಛೇದಕ್ಕೆ ಸೇರುವವರೆಗೂ ನಿರಂತರವಾಗಿರುತ್ತದೆ. ತುಳು ಭಾಷೆಯ ಮೇಲೆ ಮತ್ತು ಸಾಹಿತ್ಯದ ಮೇಲೆ ವಿವಿಧ ಆಯಾಮದ ನೆಲೆಯಿಂದ ಅಧ್ಯಯನ ಮಾಡುವ ಅವಕಾಶವಿದೆ.

**ಪರಾಮರ್ಶನ ಗ್ರಂಥಗಳು**

1. ತುಳುಸಾಹಿತ್ಯ ಚರಿತ್ರೆ, ಪ್ರಧಾನ ಸಂಪಾದಕ ಡಾ. ಬಿ.ಎ ವಿವೇಕ ರೈ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ 2007,
2. ಎಸ್.ಯು ಪಣಿಯಾಡಿ, ಮುರಳೀಧರ ಉಪಾಧ್ಯ ಹಿರಿಯಡಕ, ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ, 1996.
3. ತುಳು ಬಾಸೆಗ್ ಮಾನಾದಿಗೆ, ಸಂಪಾದನೆ ಮಂ. ಆನಂದ ಶೆಟ್ಟಿ, ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ, 2004.
4. ನಾಡು ನುಡಿಯಿದೊಂದು ಬಗೆ, ಮುದ್ದು ಮೂಡುಬೆಳ್ಳೆ, ಹೇಮಾಂಶು ಪ್ರಕಾಶನ ಮಂಗಳೂರು, 2004.

---

[i] 'ಮದಪ್ಪೆರಾವಂದಿ ತುಳುವೆರ್'–ತುಳುನಾಡಿನ ವಿವಿಧ ಕ್ಷೇತ್ರಗಳ ಸಾಧಕರ ಪರಿಚಯದ ಪುಸ್ತಕ ಈ ಮೂಲಕ 50ಕ್ಕೂ ಹೆಚ್ಚು ಪುಸ್ತಕಗಳು ಪ್ರಕಟವಾಗಿದೆ.